ಶ್ರೀ ವಾಟಾಳ್ ನಾಗರಾಜ್ :- ತಮಗೆ ಅರ್ಥವಾಗಬಹುದು. ಇಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲ. ಸಚಿವ ಸಂಪುಟದ ಕೇವಲ ಇಬ್ಬರು ಮಂತ್ರಿಗಳನ್ನು ಬಿಟ್ಟರೆ ಉಳಿದವರು ಯಾರೂ ಇಲ್ಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಅಧ್ಯಕ್ಷರೇ, ಇವತ್ತಿನ ಪ್ರಶ್ನೋತ್ತರ ಸಂದರ್ಭದಲ್ಲಿ 8 ಜನ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುವುದಕ್ಕೆ ಇರಬೇಕಾಗಿದೆ. ಅವರ ಪೈಕಿ ಒಬ್ಬರು ಮಾತ್ರ ಬಂದಿದ್ದಾರೆ. ಇನ್ನುಳಿದ 7 ಜನ ಮಂತ್ರಿಗಳು ಬಂದಿಲ್ಲ. ಅವರು ಏತಕ್ಕೆ ಬಂದಿಲ್ಲ, ಪರಿಸ್ಥಿತಿ ಏನಾಗಿದೆ, ಆ 7ಜನ ಮಂತ್ರಿಗಳು ತಮಗೇನಾದರೂ ಪತ್ರವನ್ನು ಬರೆದಿದ್ದಾರೆಯೇ? ಅಥವಾ ಅವರೆಲ್ಲರೂ ಭಿನ್ನಮತೀಯ ಚಟುವಟಿಕೆಗಳಲ್ಲಿ ತೊಡಗಿದ್ದಾರೆಯೇ? ಮಾನ್ಯ ಮುಖ್ಯಮಂತ್ರಿಗಳಲ್ಲಿ ಅವರಿಗೆ ವಿಶ್ವಾಸವಿಲ್ಲವೇ? ರಾಜೀನಾಮೆಯನ್ನು ಕೊಟ್ಟಿದ್ದಾರೆಯೇ? ತಾವು ಸರ್ಕಾರವನ್ನು ತರಾಟೆಗೆ ತೆಗೆದುಕೊಂಡು ಮಂತ್ರಿಗಳು ಏತಕ್ಕೆ ಬಂದಿಲ್ಲ ಎಂಬುದನ್ನು ಕೇಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಈ ಸದನ 11 ಗಂಟೆಗೆ ಅಂದಮೇಲೆ ಅವರು ಸದನಕ್ಕೆ ಬಂದು ಗೌರವವನ್ನು ಕೊಡಬೇಕು. ಆದರೆ ಮಂತ್ರಿಗಳು ಗೌರವವನ್ನು ಕೊಡುತ್ತಿಲ್ಲ ; ಆಡಳಿತ ಪಕ್ಷದವರೂ ಕೂಡ ಗೌರವವನ್ನು ಕೊಡುತ್ತಿಲ್ಲ. ಇದು ಸರಿಯಲ್ಲ. ಈ ಸದನ ಬಹಳ ಮಹತ್ತರವಾದುದು. ಈ ಸದನ ಸೇರಿದಕೂಡಲೇ ತಾವೂ ಕೂಡ ಕಾಲಕ್ಕೆ ಸರಿಯಾಗಿ ಬಂದು ಪೀಠದಲ್ಲಿ ಕುಳಿತುಕೊಳ್ಳುತ್ತಿದ್ದೀರಿ. ಆದರೆ ಮಂತ್ರಿಗಳೇ ಬರುವುದಿಲ್ಲ ಎಂದರೆ ಅವರು ಈ ಸದನಕ್ಕೆ ತೋರಿಸುತ್ತಿರುವ ಅಗೌರವ ಇದು ಎಂದು ಹೇಳಬೇಕಾಗುತ್ತದೆ. ಅಷ್ಟೇ ಅಲ್ಲ, ಇದು ಅಕ್ಷಮ್ಯ ಅಪರಾಧವೆಂದು ಹೇಳಬೇಕಾಗುತ್ತದೆ. ಅನೇಕಸಾರಿ ಈ ಸದನದಲ್ಲಿ ಸಚಿವಸಂಪುಟದ ಮಂತ್ರಿಗಳೇ ಇಲ್ಲವೆಂದು ನಾವು ತಮಗೆ ಹೇಳಿದ್ದೇವೆ. ತಾವೂ ಕೂಡ ಅನೇಕಸಾರಿ ಅವರಿಗೆ ಎಚ್ಚರಿಕೆಯನ್ನೂ ಕೂಡ ಕೊಟ್ಟಿದ್ದೀರಿ. ಇಷ್ಟಾದರೂ ಕೂಡ ಇವತ್ತಿನ ಪ್ರಶ್ನೆಗಳಿಗೆಉತ್ತರ ಕೊಡಬೇಕಾದ 7 ಜನ ಮಂತ್ರಿಗಳು ಇಲ್ಲವೆಂದರೆ ಹೇಗೆ? ತಮಗೆ ಗೊತ್ತಿರುವಂತೆ ಇಲ್ಲಿಗೆ ಬಂದಿರುವವರಲ್ಲಿ 3 ಜನ ಮಂತ್ರಿಗಳ ಪೈಕಿ ಇಬ್ಬರು ಮಾತ್ರ ಈ ಪ್ರಶ್ನೆಗಳಿಗೆ ಉತ್ತರ ಕೊಡುವುದಕ್ಕೆ ಸಂಬಂಧಪಟ್ಟವರು. ಇನ್ನುಳಿದ ಮಂತ್ರಿಗಳು ಯಾರೂ ಇಲ್ಲವೆಂದರೆ ಏನು ಹೇಳಬೇಕು. 42 ಜನ ಮಂತ್ರಿಗಳು ಅಂದರೆ ಒಂದು ದೊಡ್ಡ ಟ್ರಕ್‌ಲೋಡ್ ಇದ್ದಂತೆ. ಇಷ್ಟು ಮಂತ್ರಿಗಳ ಪೈಕಿ 5 ಜನ ಮಂತ್ರಿಗಳು ಸಹ ಇಲ್ಲ ಎಂದರೆ ಇದು ತುಂಬಾ ಆಭಾಸವಾಗುತ್ತದೆ.

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಮಂತ್ರಿಗಳು) :- ಮಾನ್ಯ ಅಧ್ಯಕ್ಷರೆ, ಇವತ್ತಿನ ಪ್ರಶ್ನೆಗಳ ಪಟ್ಟಿಯಲ್ಲಿ ಕೊನೆಯ ಪ್ರಶ್ನೆ ಮಾನ್ಯ ಸದಸ್ಯರಾದ ಎಸ್.ಹೆಚ್. ಕೌಜಲಗಿಯವರಿಗೆ ಸೇರಿದ್ದು ಇದೆ. ಆದ್ದರಿಂದ ಮೊದಲನೇ ಪ್ರಶ್ನೆ ಹಾಗೂ ಕೊನೆಯ ಪ್ರಶ್ನೆ ಇವೆರಡೂ ಕೂಡ ಒಂದೇ ವಿಷಯಕ್ಕೆ ಸಂಬಂಧಪಟ್ಟಿರುವುದರಿಂದ ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ ಉತ್ತರ ಕೊಡಲು ನನಗೆ ಅನುಕೂಲವಾಗುತ್ತದೆ.

ಅಧ್ಯಕ್ಷರು :- ಆಗಬಹುದು.

ವಿಷಯ :- ಅಕ್ಷಯ ಯೋಜನೆ ಕುರಿತು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 101(619)

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ(ಔರಾದ್)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಾಲೆಗಳಲ್ಲಿ ಮಕ್ಕಳ ಹಾಜರಾತಿಯನ್ನು ಉತ್ತಮಗೊಳಿಸುವ ಸಲುವಾಗಿ ಪ್ರಾರಂಭಿಸಲಾದ ಆಕ್ಷಯ ಯೋಜನೆಗೆ ಪ್ರಾರಂಭವಾದಾಗಿನಿಂದ ಇಲ್ಲಿಯವರೆಗೆ ಬಿಡುಗಡೆ ಮಾಡಲಾದ ಹಣವೆಷ್ಟು? (ವರ್ಷವಾರು ಬಿಡುಗಡೆ ಮಾಡಲಾದ ಹಣದ ವಿವರಗಳನ್ನು ಜಿಲ್ಲಾವಾರು ಅಂಕಿ ಅಂಶಗಳಲ್ಲಿ ಒದಗಿಸುವುದು?

ಆ) ಈ ಯೋಜನೆ ಪ್ರಗತಿದಾಯಕವಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಈ ಯೋಜನೆಯನ್ನು ರದ್ದುಪಡಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ
(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು)

ವರ್ಷ	ಬಿಡುಗಡೆ ಮಾಡದ ಆಯವ್ಯಯ
1991-92	ರೂ. 18,07,68,075-00 (ಜಿಲ್ಲಾವಾರು ಮಾಹಿತಿಯನ್ನು ಅನುಬಂಧ -1ರಲ್ಲಿ ತೋರಿಸಿದೆ)
1992-93	ರೂ. 13,70,00,000-00 ಈ ಮೊತ್ತವನ್ನು 93-94ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗಿದ್ದು ಜಿಲ್ಲಾವಾರು ಹಂಚಿಕೆ ಇನ್ನು ಮಾಡಬೇಕಾಗಿದೆ.
1993-94	ರೂ. 06-00 ಕೋಟಿಗಳು ಇದರಲ್ಲಿ ರೂ. 3.00 ಕೋಟಿಯನ್ನು ಸಮವಸ್ತ್ರಗಳ ಬಾಬ್ತಿಗಾಗಿ, ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮಕ್ಕೂ ಹಾಗೂ ರೂ. 3.00 ಕೋಟಿಯನ್ನು ಆಹಾರ ಪೂರೈಕೆಗಾಗಿ ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಸಂಸ್ಥೆಗೆ ಬಿಡುಗಡೆ ಮಾಡಿದೆ.

ಹೌದು,

1991-92ನೇ ಸಾಲಿನಲ್ಲಿ ಈ ಯೋಜನೆಯನ್ನು ಹೊಸದಾಗಿ ರೂಪಿಸಿದಾಗ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಉತ್ತಮಗೊಳಿಸಲು ನಗದು ರೂಪದಲ್ಲಿ ಹಣವನ್ನು ಮಕ್ಕಳಿಗೆ ವಿತರಣೆ ಮಾಡಲು ರೂಪಿಸಲಾಗಿತ್ತು ಆದರೆ ಈ ವಿತರಣಾ ಕಾರ್ಯಕ್ರಮದಲ್ಲಿ ಹಲವಾರು ಆಡಳಿತಾತ್ಮಕ ಸಮಸ್ಯೆಗಳು ತಲೆದೋರಿದ ಕಾರಣ ಯೋಜನೆಯನ್ನು ಪುನರ್‌ರೂಪಿಸಿ ಪ್ರಾಥಮಿಕ ಹಂತದಲ್ಲಿ ಶಿಕ್ಷಣ ಕಾರ್ಯಕ್ರಮ ಆತ್ಯಾಕರ್ಷಕವಾಗುವಂತೆ ಮಾಡಲಾಗಿದೆ. ಇದರಿಂದಾಗಿ, ಈ ಯೋಚನೆ ಪ್ರಗತಿದಾಯವಾಗುವುದೆಂದು ನಿರೀಕ್ಷಿಸಲಾಗಿದೆ. (ವಿವರಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ)

-ಇಲ್ಲ-

ಅನುಬಂಧ 1

1991-92 ರಲ್ಲಿ 'ಆಕ್ಷಯ'ದ ಯೋಜನೆಯಡಿಯಲ್ಲಿ ಜಿಲ್ಲಾವಾರು ಬಿಡುಗಡೆ ಮಾಡಿದ ಹಣದ ವಿವರ

ಕ್ರ ಸಂ:	ಜಿಲ್ಲೆಗಳು	ಬಿಡುಗಡೆ ಮಾಡಿದ ಹಣ
1.	ಬೆಂಗಳೂರು ಗ್ರಾಮಾಂತರ	81,52,278.00
2.	ಬೆಂಗಳೂರು ಉತ್ತರ	31,90,012.00
3.	ಬೆಂಗಳೂರು ದಕ್ಷಿಣ	58,37,880.00
4.	ಕೋಲಾರ	1,03,49,516.00
5.	ತುಮಕೂರು	1,10,85,313.00
6.	ಚಿತ್ರದುರ್ಗ	97,94,896.00
7.	ಶಿವಮೊಗ್ಗ	83,90,328.00
8.	ಮೈಸೂರು	1,19,89,618.00
9.	ಮಂಡ್ಯ	70,13,383.00
10.	ದಕ್ಷಿಣ ಕನ್ನಡ	87,56,382.00
11.	ಮಡಿಕೇರಿ	21,44,831.00
12.	ಚಿಕ್ಕಮಗಳೂರು	46,92,591.00
13.	ಹಾಸನ	65,63,879.00
ಕ್ರ ಸಂ:	ಜಿಲ್ಲೆಗಳು	ಬಿಡುಗಡೆ ಮಾಡಿದ
14.	ಬೆಳಗಾಮ್	1,64,62,496.00
15.	ಬಿಜಾಪುರ	1,26,61,361.00
16.	ಧಾರವಾಡ	1,44,61,192.00
17.	ಉತ್ತರ ಕನ್ನಡ	60,70,088.00
18.	ಗುಲ್ಬರ್ಗಾ	1,01,95,936.00
19.	ಬೀದರ್	47,14,205.00
20.	ಬಳ್ಳಾರಿ	96,11,612.00
21	ರಾಯಚೂರು	86,30,278.00
	ಒಟ್ಟು	**18,07,68,075.00**

ಅನುಬಂಧ-2

ಪರಿಷ್ಕೃತ ಅಕ್ಷಯ ಯೋಜನೆ

ಹಾಲಿ ಜಾರಿಯಲ್ಲಿರುವ ಅಕ್ಷಯ ಕಾರ್ಯಕ್ರಮದಿಂದ ನಿರೀಕ್ಷಿತ ಮಟ್ಟದ ಪ್ರಯೋಜನ ಲಭಿಸಿಲ್ಲವೆಂದು ಭಾವಿಸಿ ಇದರ ಬದಲಿಗೆ 3 ಘಟಕಾಂಶಗಳುಳ್ಳ ಹಲವಾರು ಸಮಗ್ರ ಚಟುವಟಿಕೆಗಳನ್ನೊಳಗೊಂಡ ಪರಿಷ್ಕೃತ ಕಾರ್ಯಕ್ರಮವನ್ನು ಜಾರಿಗೊಳಿಸಲು ಉದ್ದೇಶಿಸಿದೆ.

ಮಗು ಕೇಂದ್ರಿಕೃತ ಕಾರ್ಯಕ್ರಮಗಳು : ಇದರಡಿಯಲ್ಲಿ ಉಚಿತ ಸಮವಸ್ತ್ರ ವಿತರಿಸುವ 'ವಸ್ತ್ರಧಾರ' ಉಚಿತ ಪಠ್ಯಪುಸ್ತಕವನ್ನೊದಗಿಸುವ 'ಪುಸ್ತಕಾಲಯ' ಹಾಗೂ ಶಕ್ತಿಯುತ ಆಹಾರ ಒದಗಿಸುವ 'ಆಹಾರ' ಕಾರ್ಯಕ್ರಮಗಳನ್ನು ಜಾರಿಗೊಳಿಸಲಿದ್ದು ಇವುಗಳಿಗೆ ಕ್ರಮವಾಗಿ ರೂ. 1030 ಲಕ್ಷ; ರೂ. 700 ಲಕ್ಷ ಹಾಗೂ ರೂ. 3500 ಲಕ್ಷ ಹೀಗೆ ಒಟ್ಟು ರೂ. 5230 ಲಕ್ಷಗಳನ್ನು ಒದಗಿಸಲಾಗಿದೆ.

ಶಾಲೆ ಕೇಂದ್ರೀಕೃತ ಕಾರ್ಯಕ್ರಮಗಳು (ವಿದ್ಯಾವರಣ): ಇದರಡಿಯಲ್ಲಿ ಶಾಲೆ ಆಟದ ಮೈದಾನಗಳ ನಿರ್ಮಾಣ ಶಾಲಾ ಕಟ್ಟಡಗಳ ಲಘು ದುರುಸ್ತಿ ಮತ್ತು 1ನೇ ತರಗತಿಗೆ ಪ್ರತ್ಯೇಕವಾದ ತರಗತಿ ಕೊಠಡಿಗಳನ್ನು ನಿರ್ಮಿಸಲುದ್ದೇಶಿಸಿದ್ದು, ಇವುಗಳಿಗೆ ಕ್ರಮವಾಗಿ ರೂ. 300 ಲಕ್ಷ; ರೂ. 100 ಲಕ್ಷ ಮತ್ತು ರೂ. 1000 ಲಕ್ಷಗಳನ್ನು ಒದಗಿಸಲಾಗಿದೆ.

ಪ್ರಾಥಮಿಕ ಶಾಲಾ ಕಟ್ಟಡಗಳ ದುರಸ್ತಿಗಾಗಿ ಯೋಜನೇತರ ಆಯವ್ಯಯದಡಿಯಲ್ಲಿ ರೂ.210 ಲಕ್ಷಗಳನ್ನು ಸಹಾ ಒದಗಿಸಿದೆ.

ಶಾಲಾ ಸಾಮಾನ್ಯ (ಸ್ಕೂಲ್ ಜನರಲ್) ಕಾರ್ಯಕ್ರಮಗಳು : ಈ ಕಾರ್ಯಕ್ರಮದಡಿಯಲ್ಲಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಏರ್ಪಡಿಸುವ 'ಯಾತ್ರಾ' ಮಕ್ಕಳಿಗೆ ವಾಚನಾಲಯ ಕ್ಲಬ್ ನಿರ್ಮಿಸುವ, ಕಲೆ ಸಂಗೀತ ಮತ್ತು ಕ್ರೀಡಾ ಉಪಕರಣಗಳನ್ನು ಒದಗಿಸುವ 'ಮನೋರಂಜನಾ' ಕಾರ್ಯಕ್ರಮಗಳನ್ನು ಜಾರಿಗೆ ತರಲುದ್ದೇಶಿಸಿದ್ದು, ಈ ಉದ್ದೇಶಗಳಿಗಾಗಿ ಕ್ರಮವಾಗಿ ರೂ. 100 ಲಕ್ಷ; , ಮತ್ತು ರೂ. 200 ಲಕ್ಷಗಳನ್ನು ಒದಗಿಸಲಾಗಿದೆ.

ವಿಷಯ : - ಅಕ್ಷಯ ಯೋಜನೆ ಅಡಿಯಲ್ಲಿ ವೆಚ್ಚ ಮಾಡಿರುವ ಮೊಬಲಗು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 120(393)

ಶ್ರೀ ಶಿವಾನಂದ ಎಚ್.ಕೌಜಲಗಿ(ಬೈಲಹೊಂಗಲ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1991-92, 1992-93 ಹಾಗೂ 93-94ನೇ ಸಾಲುಗಳ ಆಯವ್ಯಯದಲ್ಲಿ ಅಕ್ಷಯ ಯೋಜನೆಗೆ ಎಷ್ಟು ಹಣವನ್ನು ಒದಗಿಸಲಾಗಿತ್ತು.

ಆ) ಈ ಯೋಜನೆಯಡಿಯಲ್ಲಿ ಆ ವರ್ಷಗಳಲ್ಲಿ ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿರುವುದು?

ಇ) ಬೆಳಗಾವಿ ಜಿಲ್ಲೆಗೆ ಅಕ್ಷಯ ಯೋಜನೆಯಡಿಯಲ್ಲಿ ಸದರೀ ವರ್ಷಗಳಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿತ್ತು ಹಾಗೂ ಅದರಲ್ಲಿ ಎಷ್ಟು ಹಣ ಖರ್ಚಾಗಿರುವುದು (ತಾಲ್ಲೂಕುವಾರು ವಿವರ ಕೊಡುವುದು)